ರಸ್ತೆ ಪರಿಮಿತಿ ಕುರಿತು

1877(2107); ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ

ಅ) ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿಗಳಿಗೆ ರಸ್ತೆಯ ಮಧ್ಯಭಾಗದಿಂದ ಎರಡೂ ಬದಿಗೆ 40, 40 ಮೀಟರ್ ಮತ್ತು ಜಿಲ್ಲಾ ಮುಖ್ಯರಸ್ತೆಗಳಿಗೆ 25 ಮೀಟರ್ ರಸ್ತೆ ಪರಿಮಿತಿಯನ್ನು ನಿಗದಿಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಾದರೆ, ರಸ್ತೆ ಪರಿಮಿತಿಯ ಜಮೀನುಗಳಿಗೆ ಪರಿಹಾರ ಕೊಡದೆ, ಭೂಸ್ವಾಧೀನಪಡಿಸಿಕೊಳ್ಳದೇ, ಸದರಿ ಜಮೀನಿನಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ಮಾಡಲು ಬಿಡದಿರುವುದರಿಂದ ಸಾರ್ವಜನಿಕರು ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ, ಸದರಿ ಜಮೀನುಗಳನ್ನು ಭೂ–ಸ್ವಾಧೀನಪಡಿಸಿಕೊಂಡು ಪರಿಹಾರ ನೀಡುವ ಬಗ್ಗೆ ಸರ್ಕಾರದ ನಿಲುವೇನು?

ಡಾ॥ ಹೆಚ್.ಸಿ. ಮಹದೇವಪ್ಪ (ಲೋಕೋಪಯೋಗಿ ಸಚಿವರು)

ಅ) ಬಂದಿದೆ.

ಆ) ರಸ್ತೆ ಪರಿಮಿತಿಯ ಜಮೀನಿನಲ್ಲಿ ವ್ಯವಸಾಯ ಕಾರ್ಯ ಮಾಡಲು ಅವಕಾಶವಿದ್ದು, ಸದರಿ ಜಮೀನಿನಲ್ಲಿ ಯಾವುದೇ ಕಟ್ಟಡ ಕಾಮಗಾರಿ ಹಾಗೂ ಭೂ ಪರಿವರ್ತನೆಗೆ ಯಾವುದೇ ಅವಕಾಶವಿರುವುದಿಲ್ಲ. ಭೂ ಪರಿವರ್ತನೆ ಮಾಡಿದಲ್ಲಿ ಭೂಸ್ವಾಧೀನದ ವೇಳೆ ಪರಿಹಾರದ ಮೊತ್ತ ಹೆಚ್ಚಾಗುವುದರಿಂದ ಹಾಗೂ ಇದರಿಂದಾಗಿ ಭೂಸ್ವಾಧೀನ ಸಂದರ್ಭದಲ್ಲಿ ಸರ್ಕಾರಕ್ಕೆ ಆರ್ಥಿಕ ಹೊರೆ ಆಗಬಾರದೆಂಬ ಏಕೈಕ ಉದ್ದೇಶದಿಂದ ಇಂತಹ ಯಾವುದೇ ಕಾರ್ಯಗಳಿಗೆ ಅನುಮತಿ ಇರುವುದಿಲ್ಲ.

ಇದರಿಂದಾಗಿ ಸಾರ್ವಜನಿಕರು ತೊಂದರೆ ಅನುಭವಿಸುತ್ತಿರುವ ಯಾವುದೇ ಪ್ರಕರಣಗಳು ಇರುವುದಿಲ್ಲ.

ಇ) ರಸ್ತೆ ಅಗಲೀಕರಣ ಹಾಗೂ ಅಭಿವೃದ್ಧಿಪಡಿಸುವ ಸಮಯದಲ್ಲಿ ಅಗತ್ಯವೆನಿಸಿದಾಗ ನಿಯಮಾನುಸಾರ ಭೂಸ್ವಾಧೀನಪಡಿಸಿಕೊಂಡು ಭೂ ಮಾಲೀಕರಿಗೆ ಪರಿಹಾರ ನೀಡಲಾಗುವುದು.

ಬೃಹತ್ ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿರುವ ಗೃಹ ನಿರ್ಮಾಣ ಸಹಕಾರ ಸಂಘ

1878(1223); ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ)

ಅ) ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿರುವ ಗೃಹ ನಿರ್ಮಾಣ ಸಹಕಾರ ಸಂಘಗಳ ವಿವರ ನೀಡುವುದು;

ಆ) ಸದರಿ ಸಹಕಾರ ಸಂಘಗಳಿಗೆ ಗೃಹ ನಿರ್ಮಾಣ ಕಾರ್ಯಚಟುವಟಿಕೆಗಳಿಗಾಗಿ ಮಂಜೂರಾತಿ ನೀಡಿರುವ ಜಮೀನುಗಳ ಪ್ರಮಾಣದ ಕುರಿತು ಮೂರು ವರ್ಷಗಳ ಅವಧಿಯ ವಿವರಗಳನ್ನು ಸಹಕಾರ ಸಂಘಗಳ ಹೆಸರು ಸಹಿತ ನೀಡುವುದು;

ಇ) ಗೃಹ ನಿರ್ಮಾಣ ಸಹಕಾರ ಸಂಘಗಳು ಸಾರ್ವಜನಿಕರಿಗೆ ಮೂರು ವರ್ಷಗಳಲ್ಲಿ ಎಷ್ಟು ಪ್ರಮಾಣದ ನಿವೇಶನಗಳನ್ನು ಕಾನೂನು ನಿಯಮಗಳಡಿಯಲ್ಲಿ ವಿತರಿಸಿವೆ (ಸಂಘವಾರು ವಿವರಗಳನ್ನು ನೀಡುವುದು)?

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ (ಮಾನ್ಯ ಸಹಕಾರ ಸಚಿವರು)

ಅ) ಬಿ.ಬಿ.ಎಂ.ಪಿ ಯ ವ್ಯಾಪ್ತಿಯಲ್ಲಿ ಒಟ್ಟು 417 ಗೃಹ ನಿರ್ಮಾಣ ಸಹಕಾರ ಸಂಘಗಳು ಇದ್ದು ವಿವರ ಕೆಳಕಂಡಂತೆ ಇರುತ್ತದೆ.

ಕ್ರ.ಸಂ.	ಜಿಲ್ಲೆ	ಕಾರ್ಯನಿರತ	ಸ್ಥಗಿತ	ಸಮಾಪನೆ	ಒಟ್ಟು
1	ಉತ್ತರ ವಲಯ	156	10	14	180
2	ಕೇಂದ್ರ ವಲಯ	143	09	33	185
3	ದಕ್ಷಿಣ ವಲಯ	45	00	07	52
	ಒಟ್ಟು	**344**	**19**	**54**	**417**